doc-133
T-P-2

SATYAVADI Founded 1917 Regd. No. M 1299.

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 164 | ಗುರುವಾರ 7—3—46 | ಬಿಡಿ ಪ್ರತಿ 3 ಪೈ

ಚುನಾವಣೆಯ ಖರ್ಚು

ಪಂಜಾಬಿನಲ್ಲಿ ಪ್ರಾಂತಿಕ ಎಸೆಂಬ್ಲಿಯ ಇಲೆಕ್ಶನ ನಡೆದಾಗ ವಿ॥ ಬ್ರೇಲ್ಸ್‌ಫರ್ಡರು ಹಾಜರಿದ್ದರು. ಒಬ್ಬೊಬ್ಬ ಉಮೇದ್ವಾರರು ಸರಾಸರಿ ರೂ 1—1 ಲಕ್ಷ ಖರ್ಚು ಮಾಡಿರುವರಾಗಿ ಅವರು ಬರೆದಿದ್ದಾರೆ. 2—2 ಲಕ್ಷ ಖರ್ಚು ಮಾಡಿದವರೂ ಇದ್ದಾರಂತೆ. ಮತದಾರರಿಗೆ ಹಣ ಕೊಟ್ಟು ಮತ ಸಂಗ್ರಹವಾಗಿರುವುದಾಗಿಯೂ ಅವರ ಅಭಿಪ್ರಾಯ. ಲೀಗಿನವರು ತೀರ ಅಸಹ್ಯ ಪ್ರಕಾರಗಳನ್ನು ಸಹ ನಡೆಸಿದ್ದರಂತೆ. ಇಸ್ಲಾಂ ಧರ್ಮದ ಮೇಲೆ ಗಂಡಾಂತರ ಒಂದಿದೆ. ಲೀಗಿನ ಉಮೇದ್ವಾರರಿಗೆ ಮತ ಕೊಟ್ಟರೇನೇ ಇಸ್ಲಾಂ ಧರ್ಮವು ಉಳಿಯುತ್ತದೆ, ಎಂಬ ರೀತಿಗೆ ಮುಸಲ್ಮಾನರ ಧರ್ಮಭೋಗಕರು ಬೀದಿಬೀದಿಗಳಲ್ಲಿ ಕುರಾಣನ್ನು ಕೈಯಲ್ಲಿ ಹಿಡಿದು ಗುಲ್ಲನ್ನೆಬ್ಬಿಸಿದರೆಂದು ವಿ॥ ಬ್ರೇಲ್ಸ್‌ಫರ್ಡರು ಬರೆಯುತ್ತಾರೆ. ಗಡಿನಾಡಿನಲ್ಲೂ ಲೀಗಿನವರು ಇದೇ ಜಗೆಯ ಪ್ರಚಾರ ನಡೆಸಿದ್ದರಿಂದಲೇ ಅವರು ಉಲ್ಲೇಖಿಸಿದ್ದಾರೆ

ಂ

ಭಲ್ಲಾಭಾಯಿರ ಸ್ವಾರ್ಥತ್ಯಾಗ

ಹಿಂದೀ ರಾಷ್ಟ್ರೀಯ ಸೈನ್ಯದ ಕ್ಯಾಪ್ಟನ್ ಶಹಾನವಾಜ ಪ್ರಭೃತಿ ಮೂವರ ಪರವಾಗಿ ದಿಲ್ಲಿಯ ಕೆ.ಂ ಪು ಕೋರ್ಟಿಯಲ್ಲಿ ವಕೀಲಿ ನಡೆಸಿದ್ದ ಶ್ರೀ ಭೂಲಾಭಾಯಿ ದೇಶಾಯಿ ಯವರ ಸ್ವಾರ್ಥತ್ಯಾಗದ ವ್ಯಾಪ್ತಿಯನ್ನು ಮುಂಬಯಿಯ 'ಫ್ರೀ॥ ಜೋಕೆಮಾ ಅಲ್ವಾರವರು ಪ್ರಕಟಿಸಿದ್ದಾರೆ. ಶ್ರೀ॥ ಭೂಲಾಭಾಯಿಯವರು ಕೆಂಪುಕೋಟೆಗೆ ಹೊರಟ ಸಮಯದಲ್ಲಿ ಶ್ರೀ॥ ಅಲ್ವಾರವರು ಅವರಿಗೊಂದು ವಕಾಲತು ಕೊಡಲು ಹೋಗಿದ್ದರು. ನಿಜಾವು ಹೈದರಾಬಾದಿನಲ್ಲಿನಿಸ ಒರ್ವ ದೊಡ್ಡ ಅಧಿಕಾರಿಯು ಮೇಲೆ ಒಂದು ಖಟ್ಲೆ ನಡೆಯುವುದಿತ್ತು. ಈ ಖಟ್ಲೆ ಸುಮಾರು 2 ತಿಂಗಳ ಕಾಲ ನಡೆಯುವಂತಿತ್ತು ದಿನಕ್ಕೆ ರೂ. 2000 ದಂತೆ ರು ಸುಂ ಕೊಡುತ್ತೇವೆಂದು ಶ್ರೀ ಅಳ್ವಾರವರು ತಿಳಿಸಿದರಂತೆ. ಆದರೂ ಶ್ರೀ ಭೂಲಾಭಾಯಿಯವರು ಆ ಖಟ್ಲೆಯನ್ನು ಸ್ವೀಕರಿಸಲಿಲ್ಲ! ಸುಭಾಷ ಸೈನಿಕರ ಸಂರಕ್ಷಣೆ ಮಾಡಲು ದಿಲ್ಲಿಗೇ ಸರಿದರು.

ಒರಿಸ್ಸಾ ಶಾಸನ ಸಭೆಗೆ ಇದುವರೆಗೆ 32 ಜನ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿದ್ದಾರೆ. ಅವರಲ್ಲಿ 30 ಮಂದಿ ಕಾಂಗ್ರೆಸ್, ಒಬ್ಬರು ಲೀಗ್, ಮತ್ತು ಒಬ್ಬ ಸ್ವತಂತ್ರ ಉಮೇದುವಾರರು.

ನೇ ಮಹಾ ಯುದ್ಧವೇ!

ಲಂಡನ್ ಮಾ 5— ವಾಷಿಂಗ್ಟನ್ನಿನ ಒಂದು ಪತ್ರಿಕೆಯು 3 ನೇ ವಿಶ್ವ ಮಹಾಯುದ್ಧವು ಇನ್ನು ಒಂದೆರಡು ತಿಂಗಳಲ್ಲೇ ಸುರುವಾಗುವುದೆಂದು ಪ್ರಕಟಿಸಿರುವುದು. ಲಂಡನ್ನಿನ ರಾಜಕೀಯದಲ್ಲಿ ಆಶ್ಚರ್ಯವುಂಟಾಗಿದೆ. 3 ನೇ ಯುದ್ಧವು ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ರಷ್ಯಾವು ಟರ್ಕಿ ಆಕ್ರಮಣಕ್ಕೆ ಕಾಲಿಟ್ಟಾಗ, ಟರ್ಕಿ ರಕ್ಷಣೆಗೆ ಬ್ರಿಟನ್ ಸಿದ್ಧವಾಗಿ ಪ್ರಾರಂಭವಾಗುವುದೆಂದು ಆ ಪತ್ರಿಕೆ ಹೇಳಿದೆ.

ಉಪಾಧ್ಯಾಯರುಗಳ ಮುಷ್ಕರ

ಸೂರತ್, ಮಾ 6 — ಸೂರತ್ತಿನ ಪ್ರಾಥಮಿಕ ಪಾಠಶಾಲೆಗಳ 500 ಮಂದಿಗೆ ಮೇಲ್ಪಟ್ಟು ಉಪಾಧ್ಯಾಯರುಗಳು ಹೆಚ್ಚಿದ ಸಂಬಳಕ್ಕಾಗಿ ಮುಷ್ಕರವನ್ನು ಹಿಡಿದಿರುವರು

ಅಧಿಕಾರ ತ್ಯಜಿಸುವುದಿಲ್ಲ

ವಾಷಿಂಗ್ಟನ್, ಮಾ 5 — ಮಿತ್ರ ಮಂಡಲಯ ಉತ್ತಾಯಕ್ಕಾಗಿ ತಾನು ಅಧಿಕಾರವನ್ನು ತ್ಯಜಿಸುವುದಿಲ್ಲವೆಂದು ಜ॥ ಫ್ರಾಂಕೋ ಅಮೇರಿಕಾ ಸರ್ಕಾರಕ್ಕೆ ಕಳಿಸಿದ್ದಾರೆ.

ಮೈಸೂರಿಗೆ ಕ್ರಿಕೆಟ್‌ನಲ್ಲಿ ಅದ್ಭುತ ಸೋಲು

ಇಂದೋರು ಮಾ.6 — ರಾಂಜಿ ಟ್ರೋಫಿ ಸೆಮಿ ಫೈನಲ್ಲಿನಲ್ಲಿ ಮೈಸೂರಿನವರು 1 ಇನಿಂಗಿನಲ್ಲಿ 192 ರನ್ನುಗಳನ್ನು ಮಾಡಿದರು. ಬರದೆ 2 ನೇ ಇನಿಂಗಿನಲ್ಲಿ 6 ವಿಕೆಟ್ಟುಗಳಿಗೆ 509 ರನ್ನುಗಳಾಗಿದ್ದವು. ಮೈಸೂರು ಕ್ಯಾಪ್ಟನ್ ಆಟವನ್ನು ಮುಕ್ತಾಯ ಗೊಳಿಸಿದರು. ಮೈಸೂರಿನವರು 1 ಇನ್ನಿಂಗ್ 213 ರನ್ನುಗಳಿಂದ ಸೋತರು.

ಸಂಸ್ಥಾನಗಳ ಪ್ರಜೆಗಳ ಗುರಿ ಪೂರ್ಣ ಜವಾಬ್ದಾರಿ ಸರ್ಕಾರವಾಗಬೇಕೆಂದು ಪುಂಡಿತ್ ಜವಹರು ಅಲಹಾಬಾದಿನಲ್ಲಿ ಸಂಸ್ಥಾನಗಳಲ್ಲಿ ದಬ್ಬಾಳಿಕೆಯನ್ನು ಕುರಿತು ಹೇಳಿರುವರು.

ಬೆಂಗಳೂರಿನ ಆಡ್ರೆಸಿಗೆ ಒಂದು ಪೋಸ್ಟ್ ಕಾರ್ಡ್ ಎರಡೂವರೆ ವರ್ಷ ಸಂಸ್ಥಾನವನ್ನೆಲ್ಲ ಸುತ್ತಿಕೊಂಡು ಈಗ ತಲುಪಿದೆ.

ಲಂಡನ್, ಮಾ 4 — ಮಂತ್ರಿ ಮಂಡಲ ನಿಯೋಗವು ಈ ತಿಂಗಳು ಅಂತ್ಯದಲ್ಲಿ ಭಾರತಕ್ಕೆ ಬಾರಕ್ಕದೆಂದಿದ್ದುದು ಈಗ ಬದಲಾವಣೆ ಹೊಂದಿದೆ. ಈ ತಿಂಗಳು 18 ರಲ್ಲಿ ಲಂಡನ್ನಿಂದ ನಿಯೋಗ ಹೊರಡಬಹುದೆಂದು ಹೇಳಲಾಗಿದೆ

ಮದನಾಸು, ಮಾ 5 — ಮದಂತೆ ಸು ಕೋಟೆಯಲ್ಲಾದ ಗೋಳೀಬಾರು ಸಂಬಂಧದಲ್ಲಿ ತನಿಖೆ ಕ್ರಮ ನುಂಮವರಿಯುತ್ತಿದೆ. ಗುಂಡು ಹಾರಿಸಲು ಜಸ್ಟಿಸ್ ಜೈರರು ಉಪಯೋಗಿಸಿದ ಪಿಸ್ತೂಲನ್ನು ಪೋಲೀಸರು ವಶಪಡಿಸಿಕೊಂಡಿರುವರು. ಸತ್ತ ಬಾಲಕನ ಭಾವ ಚಿತ್ರವನ್ನು ಎಲ್ಲ ಪೋಲೀಸು ಸ್ಟೇಷನ್ನುಗಳಲ್ಲಿಯೂ ಇಡಲಾಗಿದೆ

ಇಂಡೋನೇಷಿಯಾದ ರಿಪಬ್ಲಿಕನ್ನು ಡಚ್ಚರು ಅಂಗೀಕರಿಸಿದನಂತರ ಅವರೊಡನೆ ಸಂಧಿಯೆಂದು ಇಂಡೋನೇಷಿಯಾ ಮಂತ್ರಿ ಷೆರಿಯರ್ ಹೇಳಿದ್ದಾರೆ

ಅಮೇರಿಕದ ಮಾಜಿ ಅಧ್ಯಕ್ಷ ಹೂವರ್ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಯೂರೋಪಿಗೆ ಹೋಗುತ್ತಾರೆ.

ಮಾರ್ಚಿ ತಾ॥ 2 ಕಳೆದೂ ಕೂಡ ರಷ್ಯಾ ಸೇನೆಗಳು ಪರ್ಷಿಯಾದಿಂದ ವಾಪಸಾಗದಿರುವುದನ್ನು ಕುರಿತು ರಷ್ಯಕ್ಕೆ ಅಮೇರಿಕಾ ಖಂಡನಾ ಸತ್ರ ಬರೆದಿದೆ.

ಭಟ್ಕಲ್ ಬಂದರು

ಮುಂಬಯಿ ಪ್ರಾಂತ್ಯದ ಕೆರಾವಳಿಯಲ್ಲಿರುವ ಸಣ್ಣಸಣ್ಣ ಬಂದರುಗಳನ್ನು ಸುಧಾರಿಸುವ ವಿಚಾರ ಮಾಡುವುದಕ್ಕಾಗಿ ಮುಂಬಯಿ ಸರಕಾರವು ನೇಮಿಸಿದ ಮಂಡಲದ ಸಭೆ ಮುಂಬಯಿನಲ್ಲಿ ಕಳೆದ ವಾರ ಆಯಿತು. ಈ ಸಭೆಗೆ ಮೈಸೂರು ಸರಕಾರದ ಭೂಕಂದಾಯ ಇಲಾಖೆಯ ಕಾರ್ಯದರ್ಶಿಗಳೂ ಹಾಜರಿದ್ದರು. ಭಟ್ಕಲ್ ಬಂದರನ್ನು ಸುಧಾರಿಸುವ ಪ್ರಶ್ನೆಯ ಮೇಲೆ ವಿಚಾರವಿನಿಮಯವಾಯಿತು. ಮೈಸೂರು ಸಂಸ್ಥಾನಗಳ ಉದ್ದಿಮೆಗಳ ಅಭಿವೃದ್ಧಿಗಾಗಿ ಭಟ್ಕಲ್ ಬಂದರು ಆಗತ್ಯವಿರುವುದೆಂದೂ, ಮುಂಬಯಿ ಸರಕಾರವು ಆ ಬಂದರನ್ನು ಸಂಸ್ಥಾನಕ್ಕೆ ಒಪ್ಪಿಸಬೇಕೆಂದೂ ಮೈಸೂರು ಅಧಿಕಾರಿಗಳು ಮಂಡಲಕ್ಕೆ ಸೂಚಿಸಿದರಂತೆ. ಆದರೆ ಮುಂಡಳದ ನಿರ್ಣಯವು ಏನಾಯಿತೆಂಬುವುದು ತಿಳಿಯಲಿಲ್ಲ. ಮೈಸೂರು ಸರಕಾರಕ್ಕೆ ಭಟ್ಕಲ್ಲನ್ನು ಒಪ್ಪಿಸಿದ್ದರೂ ಮುಂಬಯಿ ಸರಕಾರವು ಅದನ್ನು ಸ್ವತಂತ್ರವಾಗಿ ರೂಪುಗೊಳಿಸುವುದೆಂದು ಎಣಿಸಲಾಗಿದೆ.

ಂ ಂ

ಎಜ್ಜಿತ್ತ ನಾವಿಕರ ಮುಷ್ಕರ

ಭಾರತದಲ್ಲಾದ ಈ ಸಂಬಂಧದ ಮುಷ್ಕರವನ್ನು ಕುರಿತು ಇಂಡೋನೇಷಿಯಾದ 'ಮರೋಕ' ಎಂಬ ಪತ್ರಿಕೆಯು ಈ ರೀತಿ ಅಭಿಪ್ರಾಯಪಟ್ಟಿದೆ— 'ಅಹಿಂಸೆಯಿಂದ ಭಾರತೀಯರು ತಮ್ಮ ಆಶೋತ್ತರವನ್ನು ಸಾಧಿಸಲು ಸಾಧ್ಯವಿಲ್ಲವೆಂದು ಈಗ ಅರಿತಿದ್ದಾರೆ. ಮುಂಬೈ ಕಲ್ಕತ್ತಾಗಳಲ್ಲಿ ಆರಂಭವಾದ ಗಲಭೆಗಳು ಇಡೀ ಭಾರತದಲ್ಲಿ ಹಬ್ಬಬೇಕು ಗಾಂಧೀಜಿ ಮತ್ತು ಪಂ॥ ನೆಹರು ಈ ಸುಸಮಯವನ್ನು ಉಪಯೋಗಿಸಿಕೊಳ್ಳಬೇಕು. ನಮ್ಮ ದೇಶದಲ್ಲಿ ಆರಂಭವಾದ ಕ್ರಾಂತಿಯು ಭಾರತದಲ್ಲಿ ಇಷ್ಟು ಬೇಗ ಹಬ್ಬಿರುವುದು ಸಂತೋಷದ ವಿಚಾರ, ಆದು ಈಜಿಪ್ಟ್, ಬರ್ಮಾ ಮತ್ತಿತರ ದೇಶಗಳಿಗೂ ಹರಡಬೇಕು. ಸಂಧಾನದಿಂದ ಬಳಿಯು ಜನರ ಹೊಟೆಯನ್ನು ಕಿತ್ತೊಗೆಯುವುದು ಸಾಧ್ಯವಿಲ್ಲ. ಹೋರಾಟದಿಂದಲೇ ಆದು ಸಾಧ್ಯ ಎಂದು ಇಂಡೋನೇಷಿಯನರು ಸ್ಪಷ್ಟವಾಗಿ ತೋರ್ಪಡಿಸಿದ್ದಾರೆ. (ಸ. ಭಾ.)

ಅಂಚೆ ಮತ್ತು ತಂತೀ ಇಲಾಖೆಯ ಕೆಲಸಗಾರರಲ್ಲೂ ಅಧಿಕಾರಿಗಳಲ್ಲೂ ಒಪ್ಪಂದವಾಗಿ ಮುಷ್ಕರ ನಡೆಯುವುದು ನಿಂತಿದೆ. ಸಧ್ಯಕ್ಕೆ ರೂ. 5 ಸಂಬಳವನ್ನು ಹೆಚ್ಚಿಸಬೇಕೆಂದೂ ತೀರ್ಮಾನವಾಗಿದೆ

ಚಾಪ್ಲಿನ್ ಚಿತ್ರ

ಚಾರ್ಲಿಚಾಪ್ಲಿನ್ನನ ಗೋಲ್ಡ್‌ರಷ್ ಚಿತ್ರವನ್ನು ಜಪಾನ್ ಮತ್ತು ಜರ್ಮನಿಗಳಿಗೆ, ಅಯಾಯ ರಾಷ್ಟ್ರಗಳ ಭಾಷೆಯಲ್ಲಿ ಸೆಂಸಾದಗಳನ್ನು ತಯಾರಿಸಿ ಕಳಿಸಿಕೊಡುವ ಯೋಜನೆಯೊಂದು ನಡೆದಿರುವುದೆಂದು ಹೇಳಲಡಗಿದೆ

೦ ೦

ಪಂ || ನೆಹರೂರವರ ಹೇಳಿಕೆ

ಪ್ರಜೆಗಳ ದುಃಖ ಕಷ್ಟ ಸ್ಥಿತಿ, ದಾರಿದ್ರ್ಯಗಳನ್ನು ನೋಡಲು ನಾಚಿಕೆಯಾಗುತ್ತದೆ. ಇನ್ನು ಮುಂದೆ ಹೀಗೆಯೇ ಹೋಗಲೀಸೆವು. ಜನಿವಾರ್ತಿಂದು ಕಿತಾನಂಸ್ತು ಕೊಳ್ಳೇಹೊಡೆಯುವುದನ್ನು ಸಲ್ಲಿಸಲ್ಲು ಕಾಂಗ್ರೆಸ್ಸು ದೃಢ ನಿಶ್ಚಯವನ್ನು ಮಾಡಿದೆ ಎಂದು ಪಂ|| ನೆಹರೂರವ ಹೇಳಿದ್ದಾರಂತೆ.

೦ ೦

ಸಚ್ಚಾ ಮುಸಲ್ಮಾನನಿಗೆ ಇನ್ನೂ ಬೆಂಬಲವಿದೆ

ಮಿಲಾದ್ ದಿನಾಚರಣೆಯ ಸೆಂಬಂಧ ಒಸ್ಮಾನಿಯಾ ವಿಶ್ವ ವಿದ್ಯಾನಿಲಯದ ಹಾಸ್ಟಲಿನ ವಿದ್ಯಾರ್ಥಿಗಳಲ್ಲಿ ಸೇರಿದ ಒಂದು ಸಭೆಯಲ್ಲಿ ಭಾಷಣ ಮಾಡುತ್ತ ಶ್ರೀಮತಿ ಸರೋಜಿನೀ ದೇವಿಯವರು, "ನಿಜವಾದ ಮುಸಲ್ಮಾನನಿಗೆ ನೆನ್ನ ಸಂಪೂರ್ಣ ಬೆಂಬಲವಿದೆ. ಇಸ್ಲಾಮಿನ ಧ್ಯೇಯಗಳಲ್ಲಿ ನನಗೆ ಪೂರ್ಣ ವಿಶ್ವಾಸವಿದೆ—ಸಹೋದರತ್ವ, ಸಮಾನತೆ ಮತ್ತು ದೇವರು ಒಬ್ಬನೇ ಎಂಬ ಇಸ್ಲಾಮಿನ ತತ್ವಗಳನ್ನು ನಾನು ಮೆಚ್ಚುತ್ತೇನೆ" ಎಂದಿದ್ದಾರೆ.

೦ ೦

ಶ್ರೀರಾಜಾ ಎಂಡ್ ಬ್ರದರ್ಸ್

ಶ್ರೀಮನ್ಮಹಾರಾಜರವರು ರಚಿಸಿದ್ದಾನಾಯ ಸುಪ್ರಸಿದ್ಧ ಫೋಟೋಗ್ರಾಫರಾದ ಶ್ರೀರಾಜಾ ಎಂಡ್ ಬ್ರದರ್ಸ್‌ರವನ್ನು ತಮ್ಮ ಫೋಟೋಗ್ರಾಫರಾಗಿ ಆದರಿಸಿರುವನೆಂದು ತಿಳಿಯಬಂದಿದೆ.

ಅರಸ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ. ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಯಾಗುವವರೆಗೂ ಅಂಟಿಕ್ಕೆ ಕೂಡಿಸಿಟ್ಟಲು ಪುನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1½ ಆಣೆ. ಹೆಚ್ಚುವರಿ ಕಳುಹಿಸಬೇಕು.

ದೊರಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

At Ranjit

Vijay Laxmi

ಜೋಭಸಸದುಫ್ಗ

ನೋತೀಲಾಲ್

ಮುಂತಾದವರು ವಿಶೇಷವಹಿಸಿರುವ

ವಿಜಯಲಕ್ಷ್ಮಿ

ಟಾಕ್ರ

ಸುಭಾಷ್

ತವರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —

— ಇಂದು ನೇತಾಜಿ

ಬರೆದವರು "ಕಾಂತ್"

ಸಾಹಿತ್ಯ ಮಂದಿರ

ಜಗನ್ಮೋಹನ ಬಿಲ್ಡಿಂಗ್ಸ್ ರಸ್ತೆ

ಮೈಸೂರು

At Opera —

4 ನೇ ವಾರ

ಪರಂಜ್ಯೋತಿ

From 8-3-46

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

..... ವಿಶ್ವಾಸ್ .....

MORNING SHOWS

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

— ಹೊಸ ರಾಜು ನೋಟಿಫಿಕೇಷನ್ —

ಇದರಿಂದ ಸಮಸ್ತ ಜನಗಳಿಗೆ ತಿಳಿಯಿಪಡಿಸುವುದೇನೆಂದರೆ

ಮೈಸೂರು ಸಿಟಿ ರೇಷನಿಂಗ್ ಇಲಾಖೆ ಗೋಡೌನ್‌ಗಳಲ್ಲಿರತಕ್ಕ ೫॥ ಮಣದ ಳತಿಲ ಮೂಟೆ ಮತ್ತು ೬ ಸೇರು ಉದ್ದಿನಬೇಳೆ ಹೊತ್ತು ೫॥ ಮಣದ ಸುಮಾರು ೫ಗಳ ಮೂಟೆ ಉದ್ದು ಸಹ ಮೈಸೂರು ಸಿಟಿ ರೇಷನಿಂಗ್ ಆಫೀಸರವರಿಂದ ತಾ || ೧೬-೩-೪೬ ನೇ ದಿವಸ ಶನಿವಾರ ಬೆಳಿಗ್ಗೆ ೧೦-೩೦ ಘಂಟೆಗೆ ನಂಜರಾಜ ಬಹದ್ದೂರ್ ಚತ್ರದ ಗೋಡೌನ್ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ಹರಾಜು ಮಾಡಲು ಇಷ್ಟವುಳ್ಳವರು ೫೦ ರೂಪಾಯಿಗಳ ಶೇವಣಿಯನ್ನು ಮುಂದಾಗಿ ಜಮಾ ಮಾಡಿರಬೇಕು. ಸದರಿ ಮೊಬಲಗು ಹರಾಜು ಮೈದಾನದನಂತರ ಹಾಪಸು ಮಾಡಲಾಗುತ್ತೆ.

ಹರಾಜು ಖೈದಾಧ ಹೋಲೆ ಆಖೈರು ಬಿಡ್ಡುದಾರ್ರು ಹೊರ್ತಾ ಮೊಬಲಗನ್ನು ಹಾಜಮಾಡಲು ತಪ್ಪಿದಲ್ಲಿ ದುಸರಾ ಹರಾಜು ಮಾಡಿಸಿ ಅದರಿಂದಾಗುವ ನಷ್ಟವನ್ನೂ ಮೊದಲಿನ ಬಿಡ್ಡುದಾರರಿಂದ ಕಂದಾಯದ ಬಾಕಿಯಂತೆ ವಸೂಲ್ಮಾಡಲಾಗುತ್ತದೆ. ಅದರೆ ದುಸರಾ ಹರಾಜಿನಲ್ಲಿ ಹೆಚ್ಚಿಗೆ ಉತ್ಪತ್ತಿಯಾದಲ್ಲಿ ಮೊದಲಿನ ಬಿಡ್ಡುದಾರರಿಗೆ ಯಾವ ವಿಧವಾದ ಫಾಯಿದೆಯೂ ಕೊಡಲ್ಪಡುವುದಿಲ್ಲ.

ಈ ಸಕಾನ್ನು ನೋಡಲಪೇಕ್ಷಿಸುವವರು ರೇಷನಿಂಗ್ ಆಫೀಸಿನಲ್ಲಿ ಈ ಅತಿಗಳನ್ನು ನೋಡಬಹುದಾಗಿರುತ್ತದೆ.

ಹರಾಜು ಸುಂಕಾರದ ವಂಚೂರಾತಿಗೆ ಒಳಪಟ್ಟಿರುತ್ತದೆ. ಹರಾಜು ಮುಂಚೂರಾಡಿ ಏಳು ದಿವಸಗಳೊಳಗೆ ಮಾಲನ್ನು ತೆಗೆದುಕೊಂಡು ಪಡೆಯತಕ್ಕದ್ದು.

(ಸಹಿ) ಟಿ. ವಿ. ರೆಡ್ಡಿ

ರೇಷನಿಂಗ್ ಆಫೀಸರ್, ಮೈಸೂರು.

ಹೊಸ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಪ್ರತಿ ಡಬ್ಬಿಗೆ ಕ್ಕೆ ರೂ. ೧.೮-೦

ವಿಳಾಸ— ಶಕ್ತಿಸುಧಾ ಗಂಟಿ ಚಾಮರಾಜಪುರಂ, ಮೈಸೂರು